# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 30-09-2018

**ವರದಿ**

## ನಿಸ್ವಾರ್ಥ ಸೇವೆಯ ಬದ್ಧತೆ ಇದ್ದಲ್ಲಿ ಎಲ್ಲರ ಮನ:ಪಟಲದಲ್ಲಿ ಉಳಿಯಬಹುದು – ಪ್ರಾಚಾರ್ಯ ಪ್ರೊ. ಉಮೇಶ

ಕೊಳ್ಳೇಗಾಲ : 01 ಸೆಪ್ಟೆಂಬರ್ 2018 : ನೌಕರರಿಂದ ನಿಸ್ವಾರ್ಥ ಸೇವೆ ಮೂಲಕ ಒಳ್ಳೆಯ ಕೆಲಸಗಳಾದಾಗ ವಿದ್ಯಾರ್ಥಿಗಳು ಅವರನ್ನು ಸ್ಮರಿಸುತ್ತಾರೆ. ಹಾಗೂ ಅವರು ಸದಾ ವಿದ್ಯಾರ್ಥಿಗಳ ಮನ:ಪಟಲದಲ್ಲಿ ಉಳಿಯುತ್ತಾರೆ ಎಂದು ಜೆಎಸ್‌ಎಸ್ ಮಹಿಳಾ ಕಾಲೇಜಿನ ಪ್ರಾಚಾರ್ಯ ಪ್ರೊ. ಉಮೇಶ ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಕಛೇರಿ ಅಧೀಕ್ಷಕರಾಗಿ ಸೇವೆ ಸಲ್ಲಿಸಿ ದಿನಾಂಕ : 31-08-2018ರಂದು ವಯೋನಿವೃತ್ತಿ ಪಡೆದ ಶ್ರೀ ಮಂಜೇಗೌಡರವರಿಗೆ ಕಾಲೇಜು ವತಿಯಿಂದ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನಿಸಿ ಮಾತನಾಡಿದರು.

ಶ್ರೀ ಮಂಜೇಗೌಡರು ಅತ್ಯಂತ ಸರಳ ಹಾಗೂ ಸಜ್ಜನಿಕೆಯ ನೌಕರರಾಗಿದ್ದವರು. ಕರ್ತವ್ಯ ನಿಷ್ಠೆ ಸಮಯ ಪರಿಪಾಲನೆ, ವಹಿಸಿದ ಜವಾಬ್ದಾರಿಗಳನ್ನು ಪೂರ್ವ ನಿಯೋಜಿತ ಯೋಜನೆಯಂತೆ ಯಶಸ್ವಿಯಾಗಿ ನಿರ್ವಹಿಸುವುದು, ವಿದ್ಯಾರ್ಥಿನಿಯರು ಹಾಗೂ ಸಹೋದ್ಯೋಗಿಗಳೊಡನೆ ಉತ್ತಮ ಬಾಂಧವ್ಯ ಇತ್ಯಾದಿಗಳಲ್ಲಿ ಇತರರಿಗೆ ಮಾದರಿಯಾಗಿ ನಿಲ್ಲುತ್ತಾರೆ. ಯಾವುದೇ ರೀತಿಯ ಕರ್ತವ್ಯ ಪಾಲನೆಯಲ್ಲಿ ತಮ್ಮನ್ನು ತಾವು ಅರ್ಪಿಸಿಕೊಳ್ಳುವ ಪ್ರವೃತ್ತಿವುಳ್ಳವರಾಗಿದ್ದರು. ಇವರ ವಿಶ್ರಾಂತ ಜೀವನ ಸುಖಕರವಾಗಿರಲಿ ಎಂದು ದೇವರಲ್ಲಿ ಪ್ರಾರ್ಥಿಸುವುದಾಗಿ ತಿಳಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶ್ರೀ ಮಂಜೇಗೌಡ ಜೆಎಸ್‌ಎಸ್ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುವುದೇ ಒಂದು ಪುಣ್ಯ. ಸಂಸ್ಥೆಯು ಎಲ್ಲಾ ರೀತಿಯ ಸಹಕಾರ ಹಾಗೂ ಸೌಲಭ್ಯಗಳನ್ನು ನೀಡಿದೆ. ಸಂಸ್ಥೆಯು ನೌಕರರನ್ನು ನಡೆಸಿಕೊಳ್ಳುವ ಪ್ರೀತಿ ಹಾಗೂ ವಾತ್ಸಲ್ಯವು ಇತರೆ ಸಂಸ್ಥೆಗಳಿಗೆ ಮಾದರಿಯಾಗಿ ನಿಲ್ಲುತ್ತದೆ ಎಂದು ತಿಳಿಸುತ್ತಾ, ಸೇವೆಯ ಅವಧಿಯಲ್ಲಿ ಸಹಕರಿಸಿದ ಎಲ್ಲಾ ನೌಕರ ಮಿತ್ರರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಡಾ. ಎಂ ಪ್ರಭು, ಪ್ರೊ. ಹೆಚ್ ಜಿ ನಟರಾಜನ್, ನಿವೃತ್ತರನ್ನು ಕುರಿತು ಮಾತನಾಡಿದರು. ಇದೇ ಸಂದರ್ಭದಲ್ಲಿ ಕಾಲೇಜಿಗೆ ಹೊಸದಾಗಿ ವರ್ಗಾವಣೆಗೊಂಡು ಬಂದಿರುವ ಶ್ರೀ ಷಡಕ್ಷರಪ್ಪ ಹಾಗೂ ಶ್ರೀ ಕುಮಾರಸ್ವಾಮಿಯವರಿಗೆ ಸ್ವಾಗತ ಕೋರಲಾಯಿತು.

ಕು. ಆರ್ ಪಿ ಸೌಮ್ಯ ಸ್ವಾಗತಿಸಿ, ಶ್ರೀ ಶ್ರೀನಿವಾಸ್ ರವರು ವಂದಿಸಿದರು.

ದಿನಾಂಕ 31.08.2018ರಂದು ವಯೋನಿವೃತ್ತಿ ಹೊಂದಿದ ಕಛೇರಿ ಅಧೀಕ್ಷಕರಾದ ಶ್ರೀ ಮಂಜೇಗೌಡರವರಿಗೆ ಸನ್ಮಾನಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಷಡಕ್ಷರಪ್ಪ, ಪ್ರೊ. ಹೆಚ್ ಜಿ ನಟರಾಜನ್, ಡಾ. ಎಂ ಪ್ರಭು, ಪ್ರಾಚಾರ್ಯ ಪ್ರೊ.ಉಮೇಶ, ಶ್ರೀ ಕುಮಾರಸ್ವಾಮಿ, ಶ್ರೀ ಶ್ರೀನಿವಾಸ ಮತ್ತು ಶ್ರೀ ವಿರೂಪಾಕ್ಷಮೂರ್ತಿರವರನ್ನು ಕಾಣಬಹುದು.



ಸಮಾರಂಭದಲ್ಲಿ ಸನ್ಮಾನಿತ ಶ್ರೀ ಮಂಜೇಗೌಡರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿಕೊಳ್ಳುತ್ತಿರುವುದು



ಸಮಾರಂಭದ ಅಧ್ಯಕ್ಷತೆ ವಹಿಸಿದ್ದ, ಪ್ರಾಚಾರ್ಯ ಪ್ರೊ. ಉಮೇಶ ಸನ್ಮಾನಿತರ ಕುರಿತು ಮಾತನಾಡುತ್ತಿರುವುದು.

